ವಿಜಾಪುರ ಜಿಲ್ಲೆಯಲ್ಲಿ ಪ್ರಧಾನ ಮಂತ್ರಿಗಳ ರೋಜಗಾರ್ ಯೋಜನೆ ಕುರಿತು.

2955 - ಶ್ರೀ ಬಿ. ಬಿ. ಚಿಮ್ಮನಕಟ್ಟಿ (ಬಾದಾಮಿ) : ಮಾನ್ಯ ಸಣ್ಣ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1995-96, 1996-97ನೇ ಸಾಲಿನಲ್ಲಿ ವಿಜಾಪುರ ಜಿಲ್ಲೆಯಲ್ಲಿ ಪ್ರಧಾನ ಮಂತ್ರಿಗಳ ರೋಜ್‌ಗಾರ್ ಯೋಜನೆ ಅಡಿಯಲ್ಲಿ ಎಷ್ಟು ಜನರಿಗೆ ಸಾಲ ಸೌಲಭ್ಯ ನೀಡಲಾಗಿದೆ? (ಪ್ರತಿಯೊಂದು ತಾಲ್ಲೂಕುವಾರು ವಿವರ ಹಾಗೂ ಮೊತ್ತಗಳ ವಿವರ ನೀಡುವುದು)

ಆ) ಕೈಗಾರಿಕೋದ್ಯಮದಲ್ಲಿ ಅತೀ ಹಿಂದುಳಿದಿರುವ ಜಿಲ್ಲೆಗೆ ವಿಶೇಷ ಅನುದಾನ ಯೋಜನೆಗಳೇನಾದರೂ ಕೊಟ್ಟು ಜೀವನಮಟ್ಟ ಸುಧಾರಿಸಲು ಸರ್ಕಾರ ಏನು ಕ್ರಮ ಕೈಗೊಂಡಿದೆ?

ಇ) ಹಾಗಿದ್ದಲ್ಲಿ, ಈ ವರ್ಷ ನಿರ್ದಿಷ್ಟವಾಗಿ ಏನೇನು ಕಾರ್ಯಕ್ರಮಗಳನ್ನು ಹಾಕಿಕೊಳ್ಳಲಾಗಿದೆ?

ಶ್ರೀ ಬಿ. ಎ. ಮೊಹಿದ್ದಿನ್ (ಸಣ್ಣ ಕೈಗಾರಿಕೆಗಳ ಸಚಿವರು) :

ಅ) 1995-96 ಮತ್ತು 1996-97ನೇ ಸಾಲಿನಲ್ಲಿ ಬಿಜಾಪುರ ಜಿಲ್ಲೆಯಲ್ಲಿ ಪ್ರಧಾನ ಮಂತ್ರಿಗಳ ರೋಜ್‌ಗಾರ್ ಯೋಜನೆಯಡಿಯಲ್ಲಿ ಸಾಲ ಪಡೆದ ತಾಲ್ಲೂಕುವಾರು ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಆ) ರಾಜ್ಯದಲ್ಲಿ ಕೈಗಾರಿಕೋದ್ಯಮಗಳನ್ನು ಅಭಿವೃದ್ಧಿಗೊಳಿಸುವ ಸಲುವಾಗಿ ಸರ್ಕಾರವು ಒಂದು ಕೈಗಾರಿಕಾ ನೀತಿಯನ್ನು ರೂಪುಗೊಳಿಸಿದ್ದು ಅದರ ಪ್ರಕಾರ ಜಿಲ್ಲೆಗಳನ್ನು ಅಭಿವೃದ್ಧಿ ಹೊಂದಿರುವ ಪ್ರದೇಶ, ಅಭಿವೃದ್ಧಿ ಹೊಂದುತ್ತಿರುವ ಪ್ರದೇಶ ಹಾಗೂ ಬೆಳವಣಿಗೆ ಕೇಂದ್ರಗಳೆಂದು ವಿಂಗಡಿಸಿ ಅವನ್ನು ಕ್ರಮವಾಗಿ ವಲಯ - 1, 11 ಮತ್ತು 111 ಎಂದು ಪರಿಗಣಿಸಲಾಗಿದೆ. ವಲಯಕ್ಕೆ ಅನುಗುಣವಾಗಿ ವಿವಿಧ ಪ್ರೋತ್ಸಾಹ ಹಾಗೂ ರಿಯಾಯಿತಿಗಳನ್ನು ನಿಗದಿಪಡಿಸಲಾಗಿದೆ. ಆದರಂತೆ, ಅತೀ ಹಿಂದುಳಿದ ಜಿಲ್ಲೆಗಳನ್ನು ಎರಡನೇ ಮತ್ತು ಮೂರನೇ ವಲಯಗಳಡಿಯಲ್ಲಿ ತಂದು ಸದರಿ ಜಿಲ್ಲೆಯಲ್ಲಿ ಸ್ಥಾಪಿಸಲ್ಪಟ್ಟ ಹೊಸ ಕೈಗಾರಿಕಾ ಘಟಕಗಳಿಗೆ ವಲಯಕ್ಕನುಗುಣವಾಗಿ ಲಭ್ಯವಿರುವ ಹೆಚ್ಚಿನ ಪ್ರೋತ್ಸಾಹ ಹಾಗೂ ರಿಯಾಯಿತಿಗಳನ್ನು ನೀಡುವುದರೊಂದಿಗೆ ಕೈಗಾರಿಕಾಭಿವೃದ್ಧಿಯನ್ನು ಸಾಧಿಸುವುದರೊಂದಿಗೆ ಜೀವನಮಟ್ಟ ಸುಧಾರಿಸಲು ಸರ್ಕಾರ ಕ್ರಮ ಕೈಗೊಂಡಿರುತ್ತದೆ.

ಇ) 1997-98ನೇ ಸಾಲಿಗೆ 615 ಕೈಗಾರಿಕಾ ಘಟಕಗಳನ್ನು ಸ್ಥಾಪಿಸಲು ಉದ್ದೇಶಿಸಿದ್ದು, ಒಟ್ಟು 2742.50 ಲಕ್ಷ ರೂ.ಗಳ ಬಂಡವಾಳ ಹೂಡಿಕೆಯಾಗಿ 3675 ಜನರಿಗೆ ಉದ್ಯೋಗಾವಕಾಶ ಸೃಷ್ಟಿಸುವ ಗುರಿಯನ್ನು ಹೊಂದಲಾಗಿದೆ ಅಲ್ಲದೆ ಇಲಾಖೆಯು "ವಿಶ್ವ" "ಟ್ರೈಸಂ" ಹಾಗೂ ಉದ್ಯಮಶೀಲತಾ ಅಭಿವೃದ್ಧಿ ಕಾರ್ಯಕ್ರಮಗಳ ಅಡಿಯಲ್ಲಿ ತರಬೇತಿಯನ್ನು ನೀಡುವುದರೊಂದಿಗೆ ಸದರಿ ಯೋಜನೆಗಳ ಅಡಿಯಲ್ಲಿ ಹೆಚ್ಚಿನ ಕೈಗಾರಿಕಾ ಘಟಕಗಳನ್ನು ಸ್ಥಾಪಿಸುವ ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ.

ವಿಜಾಪುರ ಜಿಲ್ಲೆಯಲ್ಲಿರುವ ಪ್ರಧಾನ ಮಂತ್ರಿಗಳ ರೋಜ್‌ಗಾರ್ ಯೋಜನೆಯಡಿ 1995-96, 96-97ನೇ ಸಾಲಿಗೇ ನೀಡಿದ ಸಾಲ ಸೌಲಭ್ಯದ ವಿವರ

ತಾಲ್ಲೂಕು	1995-96					1996-97				
	ಗುರಿ	ಮಂಜೂರಾತಿ ಸಂಖ್ಯೆ	ವಿವರ	ಬಿಡುಗಡೆ ಸಂಖ್ಯೆ	ವಿವರ	ಗುರಿ	ಮಂಜೂರಾತಿ ಸಂಖ್ಯೆ	ವಿವರ	ಬಿಡುಗಡೆ ಸಂಖ್ಯೆ	ವಿವರ
			ಮೊತ್ತ ರೂ. ಲಕ್ಷಗಳಲ್ಲಿ		ಮೊತ್ತ ರೂ. ಲಕ್ಷಗಳಲ್ಲಿ			ಮೊತ್ತ ರೂ. ಲಕ್ಷಗಳಲ್ಲಿ		ಮೊತ್ತ ರೂ. ಲಕ್ಷಗಳಲ್ಲಿ
1) ವಿಜಾಪುರ	250	236	118.00	192	80.85	250	243	132.04	106	50.44
2) ಬಾಗೇವಾಡಿ	70	79	39.50	65	27.38	70	74	41.26	61	26.15
3) ಮುದ್ದೇಬಿಹಾಳ	85	70	35.00	56	23.58	85	75	38.17	43	18.50
4) ಬಾಗಲಕೋಟೆ	130	122	61.00	99	41.69	130	112	60.36	64	29.50
5) ಬಾದಾಮಿ	95	889	44.50	72	30.32	95	73	42.84	24	11.42
6) ಹುನುಗುಂದ	90	85	42.50	69	29.06	90	67	37.70	31	14.75
7) ಜಮಖಂಡಿ	145	122	61.00	97	40.85	145	118	64.59	57	30.29
8) ಮುಧೋಳ್	80	80	40.00	67	28.22	80	84	45.95	54	30.15
9) ಬೀಳಗಿ	55	53	26.50	44	18.53	55	52	28.91	34	11.31
10) ಇಂಡಿ	85	84	42.00	68	28.64	85	96	49.23	60	25.00
11) ಸಿಂದಗಿ	60	62	31.00	50	21.06	60	59	33.53	32	10.27
ಒಟ್ಟು	**1145**	**1082**	**541.00**	**879**	**370.18**	**1145**	**1043**	**574.58**	**566**	**257.78**